# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

**ರಾಷ್ಟ್ರೀಯ ಸೇವಾ ಯೋಜನೆ**

ಪ್ರೊ. ಎ.ಎಸ್.ದೇಶಪಾಂಡೆ ಬಿ.ಇ., ಎಂ.ಟೆಕ್, ಪಿಹೆಚ್.ಡಿ. ದೂರವಾಣಿ ಸಂ : 0831-2405468

ಕುಲಸಚಿವರು ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ 2019-20/39 ದಿನಾಂಕ: 9 AUG 2019

**:ಸುತ್ತೋಲೆ:**

**ವಿಷಯ:** ಪ್ರಕೃತಿ ವಿಕೋಪಕ್ಕೆ ಒಳಗಾದ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯ ಹಾಗೂ ಪುನರ್ ವ್ಯವಸ್ಥೆಗೆ ಸಹಕಾರ ನೀಡುವ ಬಗ್ಗೆ

**ಉಲ್ಲೇಖ:** 1. ಯುಸೇ/ರಾ.ಸೇಯೋ/13/2019-20/260 ದಿನಾಂಕ: 08.08.2019

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.08.2019

ಇತ್ತೀಚೆಗೆ ಅನಿರೀಕ್ಷಿತವಾಗಿ ಕೆಲವು ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ಉಂಟಾಗಿರುವುದು ತಮಗೆ ತಿಳಿದಿದೆ. ಈಗಾಗಲೇ ಜಿಲ್ಲಾಡಳಿತ, ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರದಿಂದ ಸಮಾರೋಪಾದಿಯಲ್ಲಿ ಅಲ್ಲಿಯ ಪುನರ್ ವ್ಯವಸ್ಥೆ ಮತ್ತು ಪರಿಹಾರ ಕಾರ್ಯ ನಡೆಯುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆಯ ಕಾಲೇಜು ಘಟಕಗಳು ಇದರಲ್ಲಿ ತೊಡಗಿಸಿಕೊಳ್ಳವಂತೆ ಕೋರುತ್ತೇವೆ. ಇಂತಹ ಸಂದರ್ಭದಲ್ಲಿ ಸ್ಪಂಧಿಸಿದರೆ ರಾಷ್ಟ್ರೀಯ ಸೇವಾ ಯೋಜನೆಯ ಅಸ್ತಿತ್ವವು ಅರ್ಥಪೂರ್ಣವಾಗುತ್ತದೆ.

**ಎನ್.ಎಸ್.ಎಸ್ ಅನುಷ್ಠಾನದಲ್ಲಿರುವ ಮಹಾವಿದ್ಯಾಲಯಗಳಿಗೆ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಲಾಗಿದೆ.**

ಪುನರ್ ವ್ಯವಸ್ಥೆಗೆ ಸಂಬಂಧಿಸಿದಂತೆ, ನಿಧಿ ಸಂಗ್ರಹ ಮಾಡಬಹುದಾಗಿದೆ ಆದರೆ ಇದನ್ನು ಅತ್ಯಂತ ಪಾರದರ್ಶಕವಾಗಿ ನಿರ್ವಹಿಸುವುದು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ಮಹಾವಿದ್ಯಾಲಯದ ಪ್ರಾಂಶುಪಾಲರ ಅನುಮತಿ ಪಡೆದು ಕಾರ್ಯಕ್ರಮಧಿಕಾರಿಗಳ ನೇತೃತ್ವದಲ್ಲಿ ನಿಧಿ ಸಂಗ್ರಹ ಮಾಡಬೇಕು. ಸಂಗ್ರಹಿಸಿದ ನಿಧಿಯನ್ನು ಮುಖ್ಯಮಂತ್ರಿ ಪ್ರಕೃತಿ ಪರಿಹಾರ ವಿಕೋಪ ನಿಧಿಗೆ ನೀಡಬೇಕು. ಈ ನಿಧಿಗೆ ತೆರಿಗೆ ಕಾಯಿದೆ 80ಜಿ ಅಡಿ ಪೂರ್ಣ ತೆರಿಗೆ ವಿನಾಯಿತಿ ಇದೆ. (ಆದಾಯ ತೆರಿಗೆ ವಿನಾಯತಿ ಪಡೆಯಲು **PAN No. AAAGC1692P** ಅಥವಾ **GGGGG0000G** ಅನ್ನು ಬಳಿಸಬಹುದು) ಪ್ರಾಂಶಪಾಲರು/ಕಾರ್ಯಕ್ರಮಧಿಕಾರಿಗಳು ಪಾರದರ್ಶಕವಾಗಿ ನಿಧಿ ಸಂಗ್ರಹಿಸುವ ಕಡೆಗೆ ಮಾರ್ಗದರ್ಶನ ಮಾಡತಕ್ಕದ್ದು. ಸ್ವಯಂ ಸೇವಕ/ಸೇವಕಿಯರಿಗೆ ಸ್ವತಂತ್ರವಾಗಿ ನಿಧಿ ಸಂಗ್ರಹಿಸಲು ಅವಕಾಶ ನೀಡಬಾರದು, ಸಂಗ್ರಹಿಸಿದ ನಿಧಿಯನ್ನು ಮುಖ್ಯಮಂತ್ರಿಗಳ ಖಾತೆಗೆ ಜಮಾ ಮಾಡಿರುವ ಬಗ್ಗೆ ವಿಶ್ವವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆಯ ಕಛೇರಿಗೆ ಕಡ್ಡಾಯವಾಗಿ ಮಾಹಿತಿ ನೀಡುವಂತೆ ಕೋರಲಾಗಿದೆ.

**ಮುಖ್ಯಮಂತ್ರಿ ಪ್ರಕೃತಿ ಪರಿಹಾರ ವಿಕೋಪ ನಿಧಿಯ ಖಾತೆ ವಿವರ**

| | |
|---|---|
| ಖಾತೆಯ ಹೆಸರು | Chief Minister Relief Fund Natural Calamity |
| ಬ್ಯಾಂಕ ಹೆಸರು | S. B. I. Bank (State Bank of India) |
| ಶಾಖೆ | Vidhana Soudha Branch |
| ಖಾತೆ ಸಂಖ್ಯೆ | 37887098605 |
| ಐ.ಎಫ್.ಎಸ್.ಸಿ. ಕೋಡ್ | SBIN0040277 |
| ಎಂ.ಐ.ಸಿ.ಆರ್. ಸಂಖ್ಯೆ | 560002419 |
| ಚೆಕ್/ಡಿ.ಡಿ ಕಳುಹಿಸಬೇಕಾದ ವಿಳಾಸ | ನಂ. 235-ಎ, 2ನೇ ಮಹಡಿ, ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆ, ವಿಧಾನ ಸೌಧ, ಬೆಂಗಳೂರು-560001 |

ಅಗತ್ಯ ವಸ್ತುಗಳನ್ನು ಸಂಗ್ರಹಿಸಿದ ಕಾಲೇಜುಗಳು ನೇರವಾಗಿ ಜಿಲ್ಲಾಡಳಿತಗಳಿಗೆ ಕಳುಹಿಸಿಕೊಡಬಹುದಾಗಿದೆ. ಪರಿಸ್ಥಿತಿ ಯಥಾಸ್ಥಿತಿಗೆ ಬಂದ ಬಳಿಕ ಹತ್ತಿರದ ಕಾಲೇಜುಗಳು ಪುನರ್ ವ್ಯವಸ್ಥೆ ಮತ್ತು ಶ್ರಮದಾನ ಕಾರ್ಯಕ್ರಮಗಳನ್ನು ಸ್ವಯಂ ಸೇವಕ/ಸೇವಕಿಯರ ಮೂಲಕ ನಡೆಸಬಹುದಾಗಿದೆ. ಕಾಲೇಜುಗಳು 2019-20ರ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಗರಿಷ್ಠ ಕಾರ್ಯಕ್ರಮಗಳನ್ನು ನಡೆಸುವಂತೆ ಕೋರಲಾಗಿದೆ. **ಈ ಮಾನವೀಯ ಕಾರ್ಯದ ಬಗ್ಗೆ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳು ಸ್ವತಃ ಗಮನಹರಿಸಿ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಲು ಕೋರಲಾಗಿದೆ.**

ವಂದನೆಗಳೊಂದಿಗೆ,

09.8.2019

ಕುಲಸಚಿವರು

ಇವರಿಗೆ,

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊವಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ಕುಲಸಚಿವರು (ಮೌಲ್ಯಮಾಪನ) ವಿತಾವಿ, ಬೆಳಗಾವಿ
4. ಹಣಕಾಸು ಅಧಿಕಾರಿಗಳು, ವಿತಾವಿ, ಬೆಳಗಾವಿ
5. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ
6. ವಿಶೇಷಾಧಿಕಾರಿಗಳು, ಸಿ.ಎಸ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.